(iii) re : *Hunger strike by farmers of Ron Taluk for suspension of land revenue and other dues.*

SRI S. R. BOMMAI (Hubli).—I call the attention of the Minister for Revenue to the demands of poor farmers of Ron Taluka who are on hunger strike, for suspension of collection of land Revenue and other dues from them.

SRI B. BASAVALINGAPPA (Minister for Revenue).—I make the following statement.

There are in all 96 Villages in Ron Taluk of which 28 villages are predominently kharif villages and the remaining 68 are rabi villages. Normal rainfall of Taluk is 608 MM rainfall recorded during 1978-79 is 621.26 MM and it was adequate throughout the taluk No pest attacks or any other calamities affected, the normal yield have been reported. Crop cutting experiments were conducted. They have revealed that the yield has been between 50 and 62%. Hence, there is no case for suspension or remission of land revenue in the taluk. But, the general economic conditions of the Rayats in 28 kharif and 8 Rabi villages is reported by the Deputy Commissioner is not very satisfactory. The D puty Commissioner is examining whether there is justification for 50% suspension of the land revenue in these 36 villages. Recovery of dues is being effected only from people who are well to-do. The Deputy Commissioner further reports that there is no harassment at all as far as poor Rayats are concerned in matters of recovery of Government dues.

In addition, I would like to submit that a similar question was raised by the hon. member Sri Mattikatti on the same subject. I have answered the question on the same lines. I have instructed the Deputy Commissioner to go round and examine the conditions in the Taluk and send a report for taking further action. As soon as we receive the report action will be taken.

ಶ್ರೀ ಎಸ್. ಆರ್. ಬೊಮ್ಮಾಯಿ.—ರೋಣ ತಾಲ್ಲೂಕಿನ ರೈತರು ಉಪವಾಸ ಸತ್ಯಾಗ್ರಹವನ್ನು ಪ್ರಾರಂಭ ಮಾಡಿ ೧೫ ದಿವಸವಾಯಿತು. ಇದಕ್ಕೆ ಮೊದಲು ಅವರು ಜಿಲ್ಲಾಧಿಕಾರಿಗಳನ್ನು ಕಂಡಿದ್ದಾರೆ. ತಹಸೀಲ್ದಾರರನ್ನು ಕಂಡಿದ್ದಾರೆ. ಅಧಿಕಾರಿಗಳು ಅಲ್ಲಿ ಕ್ಯಾಂಪ್ ಆಫೀಸ್ ನೋಟಿಫಿಕೇಷನ್ ಸಹ ಮಾಡಿದ್ದಾರೆ, ನಮ್ಮ ಕಡೆ ಇದಕ್ಕೆ ಜೀಕ್ ಪಾಣಿ ಎಂದು ಹೇಳುತ್ತಾರೆ, ಇದು ಸರಿಯಾಗಿಲ್ಲ. ನಮ್ಮ ಕಡೆ ಅಷ್ಟು ಬೆಳೆ ಬಂದಿಲ್ಲ ಎಂದು ರೈತರು ಹೇಳುತ್ತಿದ್ದಾರೆ. ೫೦ ಪರ್ಸೆಂಟ್ ಬೆಳೆ ಕಡಿಮೆ ಬಂದಿದೆ ಎಂದು ರೈತರು ಹೇಳುತ್ತಿದ್ದಾರೆ, ಇದರ ಜೊತೆಗೆ ವಕ್ಕಲುತನದ ಹುಟ್ಟುವಳಿಯು ಬೆಲೆಯು ಬಹಳ ಕಡಿಮೆಯಾಗಿದೆ. ಕಳೆದ ಎರಡು ತಿಂಗಳಿಂದ ಈ ವಿಚಾರ ಜಿಲ್ಲಾಧಿಕಾರಿಗಳ ಮುಂದೆ ಇದೆ, ಈ ಪರಿಸ್ಥಿತಿಯ ಬಗ್ಗೆ ಅವರು ಸರ್ಕಾರಕ್ಕೆ ತಮ್ಮ ಶಿಫಾರಸ್ಸನ್ನು ಕಳುಹಿಸಬೇಕಾಗಿತ್ತು. ಪರಿಸ್ಥಿತಿ ಬಹಳ ಕೆಟ್ಟದ್ದು ಇರುವುದರಿಂದ ಅಲ್ಲಿಯ ರೈತರಿಂದ ವಸೂಲಿ ಮಾಡುವುದನ್ನು ಮುಂದಕ್ಕೆ ಹಾಕಬೇಕು ಎಂದು ನಾನು ತಮ್ಮನ್ನು ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ತಾವು ಜಿಲ್ಲಾಧಿಕಾರಿಗಳಿಗೆ ಆದೇಶ ಕೊಡಬೇಕು. ತಾವು ಜಿಲ್ಲಾಧಿಕಾರಿಗಳ ವರದಿ ಬೇಕು ಎಂದರೆ, ಅವರು ವರದಿ ಕೊಡುವವರಿಗೆ ರಿಕವರಿಯನ್ನು ಮಾಡುವುದನ್ನು

ಮುಂದಕ್ಕೆ ಹಾಕಬೇಕು, ಮತ್ತು ರಿಕವರಿಯನ್ನು ತಡೆಹಿಡಿಯಬೇಕು ಎಂದು ನಾನು ಹೇಳುತ್ತೇನೆ. ಅಲ್ಲಿ ಉಪವಾಸ ಕೂತವರಿಗೆ ಉಪವಾಸ ಸತ್ಯಾಗ್ರಹವನ್ನು ಬಿಡುವುದಕ್ಕೆ ತಾವು ಅವಕಾಶ ಮಾಡಿ ಕೊಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ವಿರೋದಪಕ್ಷದ ನಾಯಕರು ಹೇಳಿದ ಹಾಗೆ, ಅಧಿಕಾರಿಗಳು ಮಾಡಿರತಕ್ಕ ಅಂದಾಜು ಸರಿಯಲ್ಲ ಎನ್ನುವುದನ್ನು ನಾವು ವಿಚಾರ ಮಾತೋಣ. ಆದರೆ ಸರ್ವೇ ಸಾಮಾನ್ಯವಾಗಿ ಪೂರ್ಣ ತಾಲ್ಲೂಕಿನಲ್ಲಿ ಅಸೆಸ್‌ಮೆಂಡ್ ರಿವಿನ್ಯೂ ಸಸ್ಪೆಂಡ್ ಮಾಡುವುದು ಸರಿಯೇ ? ನಮ್ಮ ಪ್ರಕಾರ ಯಾವ ಯಾವ ಹಳ್ಳಿಗಳಲ್ಲಿ ಪರಿಸ್ಥಿತಿ ಬಹಳ ಕೆಟ್ಟಿದೆ, ಕಠಿಣವಾಗಿದೆ, ಎಂದು ನಮಗೆ ಮನವರಿಕೆಯಾದರೆ, ಇದರ ಬಗ್ಗೆ ನಾವು ತಿರ್ಮಾನ ತೆಗೆದುಕೊಳ್ಳುವವರೆಗೆ ರಿಕವರಿ ಮಾಡುವುದನ್ನು ಸಸ್ಪೆಂಡ್ ಮಾಡುವುದನ್ನು ಪೋಸ್ಟ್‌ಪೋನ್ ಮಾಡುತ್ತೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಜಿಲ್ಲಾಧಿಕಾರಿಗಳಿಂದ ರಿಪೋರ್ಟ್ ಬರುವವರಗೆ ತಡೆಹಿಡಿಯ ಬೇಕು ಎಂದು ಆದೇಶ ಕೊಡುತ್ತೀರಾ ?

ಶ್ರೀ ವಿ. ಬಿ ಮತ್ತಿ ಕಟ್ಟಿ.—ಇದು ನನ್ನ ಮತದಾರರ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಷಯ. ನಾನು ಇದೇ ತಿಂಗಳ ೯ನೇ ತಾರೀಖಿನಲ್ಲಿ ಸಭೆಯಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೆ. ಮಾನ್ಯ ಮಂತ್ರಿಗಳು ಅಲ್ಲಿಯ ಪರಿಸ್ಥಿತಿಯನ್ನು ಅಭ್ಯಾಸ ಮಾಡಿ ಯೋಗ್ಯ ಕ್ರಮ ತೆಗೆದು ಕೊಳ್ಳುತ್ತೇನೆಂದು ಹೇಳಿದ್ದರು. ನಾನು ಅಲ್ಲಿಗೆ ಹೋಗಿ ಸತ್ಯಾಗ್ರಹ ಮಾಡುತ್ತಿರುವವರನ್ನು ಭೇಟಿ ಮಾಡಿ ಬಂದಿದ್ದೇನೆ. ತಾಲ್ಲೂಕಿನ ಪರಿಸ್ಥಿತಿಯನ್ನು ನಾನು ನೋಡಿಕೊಂಡು ಬಂದಿದ್ದೇನೆ. ಅಲ್ಲಿ ಸುಗ್ಗಿಯ ಕಾಲ ಮುಗಿದು ಹೋಗಿದೆ ನಾನು ಜಿಲ್ಲಾಧಿಕಾರಿಗಳನ್ನು ಕೇಳಿದಾಗ ಅವರು ಸಣ್ಣ ಹಿಡುವಳಿದಾರರಿಗೆ ಯಾರಿಗೆ ಕೊಡುವುದಕ್ಕೆ ಶಕ್ತಿ ಇಲ್ಲ ಅಂಥವರಿಗೆ ನಾವು ಹೆರಾಸ್ ಮಾಡುವುದಿಲ್ಲ ಎಂದು ಹೇಳಿದ್ದರು. ತಾವು ಇದರ ಬಗ್ಗೆ ಸೂಕ್ತ ರೀತಿಯ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಎಂದು ನಾನು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ ಇಲ್ಲದೇ ಹೋದರೆ ಅಲ್ಲಿಯ ಕೆಲವು ಜನರು ಪರಿಸ್ಥಿತಿಯನ್ನು ಬೇರೆ ಬೇರೆ ರೀತಿಯಿಂದ ಉಪಯೋಗ ಮಾಡಿ ಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ. ಆದ್ದರಿಂದ ತಾವು ಬೇಗ ಇದರ ಬಗ್ಗೆ ಕಾರ್ಯಕ್ರಮ ತೆಗೆದುಕೊಂಡು ಅಲ್ಲಿಯ ರೈತರಿಗೆ ಆಗಿರುವ ತೊಂದರೆಯನ್ನು ನಿವಾರಿಸಬೇಕು ಎಂದು ಕೇಳಿಕೊಳ್ಳುತ್ತೇನೆ

ಶ್ರೀ ಭಾವೂರಾವ್ ದೇಶಪಾಂಡೆ.—ನಾನು ಈ ಸ್ಥಳಕ್ಕೆ ಹೋಗಿ, ಅಲ್ಲಿಯ ಕಾರ್ಯಕರ್ತರೊಡನೆ ಮಾತನಾಡಿ ಬಂದಿದ್ದೇನೆ. ಇಲ್ಲಿ ಎರಡು ತರಹದ ಸಮಸ್ಯೆಗಳು ಇವೆ. ಗ್ರಾಮ ಪಂಚಾಯತಿಯ ಚೇರ್ಮನ್ನರು ಎಂದು ಯಾರು ಇದ್ದಾರೋ ಅವರು ಉಪವಾಸ ಮಾಡುತ್ತಿದ್ದಾರೆ.

ಶ್ರೀ ಎಸ್. ಎಂ. ಶೀರನಾಳ ಚಂದ್ರಶೇಖರ್.—ಗಮನ ಸೆಳೆಯುವ ಸೂಚನೆಗೆ ಯಾವ ಸದಸ್ಯರು ಗಳು ಸಹಿಮಾಡಿದ್ದಾರೋ ಅವರು ಮಾತನಾಡುವುದಕ್ಕೆ ಅವಕಾಶ ವಿದೆಯೆಂದು ತಾವು ಹಿಂದೆ ರೂಲಿಂಗ್ ಕೊಟ್ಟಿದ್ದೀರಿ. ಈಗ ಮಾನ್ಯ ಸದಸ್ಯರಾದ ದೇಶಪಾಂಡೆಯವರು ಮಾತನಾಡುವುದಕ್ಕೆ ಅವಕಾಶವಿದೆಯೇ?

ಅಧ್ಯಕ್ಷರು —ಮಾನ್ಯ ಸದಸ್ಯರು ಆ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದಾರೆಂದು ತಿಳಿದು ಅವಕಾಶ ಕೊಡ ಲಾಗಿದೆ. ಮಾನ್ಯ ಸದಸ್ಯರು ಈ ರೀತಿಯಲ್ಲಿ ಪಾಯಿಂಟ್ ಆಫ್ ಆರ್ಡರ್ ಎತ್ತುವುದರಿಂದ ನಾನು ಅವರಿಗೆ ಮಾತನಾಡಲು ಅವಕಾಶ ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.— ತಾವು ಒಮ್ಮೆ ಅಪ್ಪಣೆ ಕೊಟ್ಟ ಮೇಲೆ ಅರ್ಧದಲ್ಲಿ ಅವರನ್ನು ಮಾತನಾಡಬೇಡಿ ಎಂದರೆ ಹೇಗೆ ? ಅವರು ಪೂರ್ತಿಯಾಗಿ ಹೇಳುವುದಕ್ಕೆ ತಾವು ಅವಕಾಶ ಕೊಡಬೇಕು. ತಾವು ಅಪ್ಪಣೆ ಕೊಟ್ಟ ಮೇಲೆ ಅದು ಸುಪ್ರೀಂ, ಅದನ್ನು ಯಾರೂ ಪ್ರಶ್ನೆ ಮಾಡುವಂತಿಲ್ಲ.

ಅಧ್ಯಕ್ಷರು.—ಮಾನ್ಯ ಸದಸ್ಯರಿಗೆ ನಾನು ಹೇಳುವುದು, ನಾನು ಉದ್ದೇಶಪೂರ್ವಕವಾಗಿ ಅವರನ್ನು ಮಾತನಾಡಬೇಡಿ ಎಂದು ಹೇಳುತ್ತಿಲ್ಲ. ಸದಸ್ಯರುಗಳು ಈರೀತಿಯಾಗಿ ಪಾಯಿಂಟ್ಸ್ ಎತ್ತಿ ಹೇಳುವುದರಿಂದ ನಾನು ಈ ರೀತಿ ಹೇಳಬೇಕಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ —ಧಾರವಾಡ ಜಿಲ್ಲೆಯ ರೋಣ ತಿರಿ ತಾಲೂಕಿನ ಗ್ರಾಮಗಳು, ೮ ರಾಬಿ ಗ್ರಾಮಗಳಲ್ಲಿ ಪರಿಸ್ಥಿತಿ ಸರಿಯಾಗಿಲ್ಲ. ಎಂದು ನಮಗೆ ವರದಿಯಾಗಿದೆ. ಇದರ ಬಗ್ಗೆ ನಾನು ಎರಡು ಮೂರು ದಿವಸದಲ್ಲಿ ವರದಿಯನ್ನು ತರಿಸಿಕೊಂಡು ರಿಕವರಿಯನ್ನು ಸ್ಥಗಿತಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.